ನಾಭೂ ಅವರ ತಂದೆ ಮೇಷ್ಟ್ರಾಗಿದ್ದರೂ ಅವರ ವಂಶದವರು ಅಗ್ಗಿಷ್ಟಿಕೆಯ ಮುಂದೆ ಕುಳಿತು ಚಿನ್ನಕ್ಕೆ ಪುಟವಿಟ್ಟ ಕಸುಬನ್ನು ಮಾಡಿಯೇ ಇರುತ್ತಾರೆಂದು ನಾನು ತಿಳಿದಿದ್ದೇನೆ. ಆ ವಾಸನೆಯಿಂದಲೇ ಇರಬೇಕು ಅವರ ಕೊರಳ ಚೈನು ಇದ್ದದ್ದು! ಅದಕ್ಕೆ ವಿಶೇಷ ಹೊಳಪು ಕೊಟ್ಟವರು ಸವಿತಾ ಅವರೇ ಅನ್ನಬಹುದು. ಯೌವನದ ದಿನಗಳಲ್ಲಿ ನಾಗಭೂಷಣ ಕಪ್ಪು ಶಿಲೆಯಲ್ಲಿ ಕಡೆದಿಟ್ಟ ಸ್ಫುರದ್ರೂಪಿ. ನಿರ್ಮಲ ಮತ್ತು ತುಂಟತನ ಒಂದಾಗಿದ್ದ ನಗು. ಇವರು ಅಚ್ಚ ಮಲ್ಲಿಗೆಯಂತಿದ್ದ ಸವಿತಾ ಅವರ ಜೊತೆಗೆ ಅಂತರಜಾತಿ ಮದುವೆಯಾದಾಗ ಪಿ. ಲಂಕೇಶ್ ಪ್ರೀತಿಯಿಂದಲೇ, ಆದರೆ ಒಡ್ಡೊಡ್ಡಾಗಿ 'ರಾಗಿ ರೊಟ್ಟಿಯ ಮೇಲೆ ತೆಂಗಿನಕಾಯಿ ಚಟ್ನಿಯಂತೆ,' ಅಂದ ನೆನಪು! ಆದರೆ ಸವಿತಾ 'ತಮ್ಮ ಕಣ್ಣಗುಡ್ಡೆಯೊಳಗಿನ ಕಪ್ಪುಚುಕ್ಕೆ' ಎಂದು ಬರೆದು ಸುಂದರ ರೂಪಕದಲ್ಲಷ್ಟೇ ಅಲ್ಲದೆ ವಾಸ್ತವವಾಗಿಯೂ ಕೊನೆಯ ಗಳಿಗೆಯವರೆಗೂ ಕಣ್ಣಲ್ಲಿಟ್ಟುಕೊಂಡೇ ಕಾಪಾಡಿದರು.

ಸುಮಾರು ಐವತ್ತು ವರ್ಷಗಳ ಹಿಂದಿನ ನೆನಪು: ನಾನು ಕಾಶಿಯಲ್ಲಿದ್ದಾಗ ನಾಭೂ ದಿಲ್ಲಿಯಲ್ಲಿದ್ದರು. ಆಗಾಗ ನಾನು ದಿಲ್ಲಿಗೆ ಹೋಗುತ್ತಿದ್ದುದುಂಟು. ಹಾಗೆ ಹೋಗಿದ್ದಾಗೊಮ್ಮೆ ಆಗತಾನೇ ದಿಲ್ಲಿ ವಿಶ್ವವಿದ್ಯಾಲಯ ಸೇರಿದ್ದ ಟಿ.ಎಸ್. ಸತ್ಯನಾಥ್ ಜೊತೆ ಟಾಗೋರ್ ಗಾರ್ಡನ್‌ನಲ್ಲಿ ಮನೆ ಮಾಡಿದ್ದ ನಾಭೂ ಮನೆಗೆ ಕಷ್ಟಪಟ್ಟು (ದಿಲ್ಲಿಯಲ್ಲಿ ಮದ್ಯ ಸಂಪಾದಿಸುವುದು ಎಷ್ಟು ತ್ರಾಸದಾಯಕವೆಂಬುದನ್ನು ಬಲ್ಲವರೇ ಬಲ್ಲರು!) ಮೂರು ಬಿಯರ್ ಬಾಟಲಿಗಳ ಜೊತೆ ಹೋಗಿದ್ದೆವು. ಅವರ ಮನೆಯಲ್ಲಿ ಓಪನರ್ ಇರಲಿಲ್ಲ. ಆ ದಿನಗಳಲ್ಲಿ ನಮ್ಮ ಮೂವರಲ್ಲಿ ಯಾರಿಗೂ ದಂತಪಂಕ್ತಿಗಳನ್ನು ಉಪಯೋಗಿಸುವ ವಿದ್ಯೆ ತಿಳಿದಿರಲಿಲ್ಲ! ನಾಭೂ ತಮ್ಮ ಬೀದಿಯಲ್ಲಿದ್ದ ತಂಪು ಪಾನೀಯ ಮಾರುವ ಅಂಗಡಿಯಲ್ಲಿ ಮೂರೂ ಬಾಟಲಿಗಳ ಮುಚ್ಚಳಗಳನ್ನು ತೆರವುಗೊಳಿಸಿಕೊಂಡು ಬರುವ ಉಪಾಯ ತಿಳಿಸಿದರು. ಮೂವರೂ ಹೋದೆವು. ಆದರೆ, ಅಂಗಡಿಯಲ್ಲಿದ್ದ ತರುಣ ತನಗೊಂದು ಬಾಟಲಿಯನ್ನು ಕೊಡುವುದಾದರೆ ಮಾತ್ರ ಓಪನ್ ಮಾಡಿಕೊಡುವೆನೆಂದು ಖಡಾಖಂಡಿತವಾಗಿ ಹೇಳಿಬಿಟ್ಟ! ನಾಭೂ ಸ್ವಲ್ಪವೂ ಬೇಸರಮಾಡಿಕೊಳ್ಳದೆ ಬಿಯರ್ ದಾನ ಮಾಡಿ ಸಮಾಜವಾದದ ಒಂದು ಝಲಕ್ ತೋರಿಸಿಬಿಟ್ಟಿದ್ದರು!

ನಾವಿಬ್ಬರೂ ಏಕವಚನದ ಗೆಳೆಯರಾಗಿದ್ದೆವು. ಅವರ ಪುಸ್ತಕವೊಂದಕ್ಕೆ ನಾನು ರಿವ್ಯೂ ಬರೆಯಲಿಲ್ಲವೆಂದು ಮುನಿಸಿಕೊಂಡು ಪತ್ರಿಕೆ ಕಳಿಸುವುದನ್ನೇ ನಿಲ್ಲಿಸಿ ಅನೇಕರಂತೆ ಸಾಮಾನ್ಯ ಮನುಷ್ಯರೂ ಆಗಿದ್ದರು. ಜಗಳಗಂಟಿಯೆಂಬ ಬಿರುದನ್ನು ಹೊತ್ತ ಈ ಮನುಷ್ಯನ ಬಗ್ಗೆ ಏನೆಲ್ಲ ತಕರಾರುಗಳನ್ನು ತೆಗೆಯಬಹುದಾದರೂ ಅಂತಿಮವಾಗಿ ಲೇಖನದ ಪ್ರಾರಂಭದಲ್ಲಿ ಸೂಚಿಸಿರುವ ರಾಜೇಂದ್ರ ಚೆನ್ನಿಯವರ ಮಾತುಗಳೇ ಬಹಳಕಾಲ ಉಳಿಯುವುದು.

## ಅಗ್ರಹಾರ ಕೃಷ್ಣಮೂರ್ತಿ

ತುಮಕೂರು ಜಿಲ್ಲೆಯ ಜೆಟ್ಟಿ ಅಗ್ರಹಾರದವರು. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆ, ಗೋಡೆಕೆರೆ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ಧಾರವಾಡ ಹಾಗೂ ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕ ಹುದ್ದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಖಿಲ ಭಾರತ ಕಾರ್ಯದರ್ಶಿಯಾಗಿ ಹುದ್ದೆ ನಿರ್ವಹಣೆ.

ಪ್ರಕಟಿತ ಕೃತಿಗಳು: 'ಬೆಳ್ದಿಂಗಳಪ್ಪನ ಪೂಜೆ', 'ನೀರು ಮತ್ತು ಪ್ರೀತಿ, 'ದಾರಾಶಿಖೋ', 'ಬಹುವಚನ', 'ಧ್ಯಾನ', 'ಸಂಸ್ಕೃತಿ ಕಥನ' (ಡಿ.ಆರ್. ನಾಗರಾಜ್ ಲೇಖನಗಳ ಸಂಪಾದನೆ), 2,500 ವಚನಗಳನ್ನು ಹದಿನಾಲ್ಕು ವಿವಿಧ ಭಾರತೀಯ ಭಾಷೆಗಳಿಗೆ ಅನುವಾದಿಸುವ ಯೋಜನೆಯಲ್ಲಿ ಎಂ.ಎಂ. ಕಲಬುರ್ಗಿ ಅವರ ಜೊತೆಗೆ ಸಂಯೋಜಕ ಸಂಪಾದಕ.